## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.

**ಸಿಸಿಃ 1000/2016**

| | | |
|---|---|---|
| ಹೆಸರು | ಈರೇಗೌಡ | ದಿಃ 07-02-2020 |
| ತಂದೆ ಹೆಸರು | ಚಿಕ್ಕಿರೇಗೌಡ | |
| ವಯಸ್ಸು | 67 ವರ್ಷ | ಪಿಡಬ್ಲ್ಯೂ: 2 |
| ಉದ್ಯೋಗ | ವ್ಯವಸಾಯ | ಸಿಡಬ್ಲ್ಯೂ: 2 |
| ವಾಸ | ಹುಲ್ಲೇಕಲ್ಲಳ್ಳಿ ಗ್ರಾಮ | ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು |

### ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ

ನಾನು ವ್ಯವಸಾಯದ ಜೊತೆಗೆ ಗೋಣಿಸೋಮನಹಳ್ಳಿ ಗ್ರಾಮದ ಹತ್ತಿರ ಇರುವ ಹುಲಿಕಲ್ಲೇಶ್ವರ ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸ ಮಾಡುತ್ತೇನೆ. ಸದರಿ ದೇವಸ್ಥಾನ ಬೆಳಿಗ್ಗೆ 8 ಕ್ಕೆ ತೆರೆದು ಸಂಜೆ 6 ಕ್ಕೆ ಬೀಗ ಹಾಕಿಕೊಂಡು ಮನೆಗೆ ಹೋಗುತ್ತೇವೆ. ಈಗ್ಗೆ 3 ವರ್ಷಗಳ ಹಿಂದೆ ನಾನು ಬೆಳಿಗ್ಗೆ 8.00 ಗಂಟೆಗೆ ದೇವಸ್ಥಾನಕ್ಕೆ ಪೂಜೆ ಮಾಡಲು ಹೋದಾಗ ಯಾರೋ ಚಿಲ್ಕವನ್ನು ಕುಯ್ದು ಹಣ ತೆಗೆಯುವ ಜಾಗದಲ್ಲಿ ಹುಂಡಿಯನ್ನು ಮೀಟಿ 5-6 ಸಾವಿರ ಹಣವನ್ನು ದೋಚಿರುತ್ತಾರೆ. ನನ್ನನ್ನು ಮೂರು ತಿಂಗಳ ನಂತರ ಪೊಲೀಸರು ಠಾಣೆಗೆ ಕರೆಸಿದ್ದರು. ನಾನು ಮತ್ತು ಚಾಸಾ-1 ಠಾಣೆಗೆ ಹೋಗಿದ್ದೆವು. ಠಾಣೆಯಲ್ಲಿ ನಮಗೆ ಯಾರನ್ನೂ ತೋರಿಸಲಿಲ್ಲ. ಆರೋಪಿಯನ್ನು ದೇವಸ್ಥಾನದ ಹತ್ತಿರ ಕರೆದುಕೊಂಡು ಬಂದು ತೋರಿಸಿರುತ್ತಾರೆ. ಆರೋಪಿ ಹೆಸರು ನನಗೆ ತಿಳಿಯಲಿಲ್ಲ. ಕಳ್ಳತನ ಆಗಿದ್ದ ಹಣ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

(ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ
ಪಾಟೀಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿದ್ದು
ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯ್ತು.)

### ಪಾಟೀಸವಾಲುಃ ಮಾನ್ಯ ಎಪಿಪಿ ರವರಿಂದ

ದಿಃ24.09.2016 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನನಗೆ ಠಾಣೆಗೆ ಬರುವಂತೆ ಪೊಲೀಸರು ತಿಳಿಸಿದ ಮೇರೆಗೆ ನಾನು ಚಾಸಾ-3 ರಿಂದ 5 ರವರು ಠಾಣೆಗೆ ಹೋದಾಗ ಆರೋಪಿಯನ್ನು ತೋರಿಸಿದರು ಎಂದರೆ ಸರಿ. ಅವರ ಹೆಸರು ವಸಂತ್ ಕುಮಾರ್ ಬಿನ್ ವೆಂಕಟೇಶ , ಅಂಗಡಿಹಳ್ಳಿ ಗ್ರಾಮ ಎಂದು ತಿಳಿಸಿದರು ಎಂದರೆ ಸರಿ. ಅದೇ ರೀತಿ ಆರೋಪಿ ನಮ್ಮ ದೇವಸ್ಥಾನದಲ್ಲಿ ಹುಂಡಿಯಲ್ಲಿದ್ದ 5 ಸಾವಿರ ಹಣ ಕಳ್ಳತನ ಮಾಡಿದ ಬಗ್ಗೆ ಮತ್ತು ಅದನ್ನು ಖರ್ಚು ಮಾಡಿಕೊಂಡಿದ್ದ ಬಗ್ಗೆ ವಿಚಾರ ತಿಳಿಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಬಿ ಬಿ ಎಸ್ ವಕೀಲರಿಂದಃ

ನಾನು ಕಳ್ಳತನ ಆಗಿದೆ ಎಂದು ಹೇಳಲಾದ ದಿನದಂದು ಜಮೀನು ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಆ ದಿನ ವ್ಯವಸಾಯಕ್ಕೆ ಜಮೀನಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಾನು 5 ನೇ ತರಗತಿಯವರೆಗೆ ಓದಿದ್ದೇನೆ. ನಾನು ಅರ್ಚಕನಾಗಿ ನೇಮಕವಾದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಹಾಗೇ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಅರ್ಚಕರಾಗಲು ಕನಿಷ್ಟ 10 ನೇ ತರಗತಿ ವಿದ್ಯಾಭ್ಯಾಸ ಮಾಡಿರಬೇಕು ಮತ್ತು ವೇದ , ಪಾಂಡಿತ್ಯ ಕಲಿತಿರಬೇಕು ಎಂದರೆ ಸರಿಯಲ್ಲ. ನಾನು ಅರ್ಚಕರಲ್ಲ ಎಂದರೆ ಸರಿಯಲ್ಲ. ದೂರು ಕೊಡಲು ನಾನು ಮತ್ತು ಇತರೆ 5-6 ಜನರು ಹೋಗಿದ್ದೆವು. ನಮ್ಮ ದೇವಸ್ಥಾನದಲ್ಲಿ 1 ಸಿಸಿ ಟಿವಿ ಕ್ಯಾಮೆರಾ ಇದೆ. ಕಳ್ಳತನ ಆದ ಬಗ್ಗೆ ಸಿಸಿ ಟಿವಿ ಕ್ಯಾಮೆರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಗೇ ಹಾಜರುಪಡಿಸಲು ತೊಂದರೆ ಇಲ್ಲ. ದೇವಸ್ಥಾನ ನೋಡಿಕೊಳ್ಳಲು ಪ್ರತ್ಯೇಕವಾಗಿ ಒಂದು ಮನೆ ಇದ್ದು , ಅದರಲ್ಲಿ ಒಂದು ಕುಟುಂಬ ಇದೆ ಎಂದರೆ ಸರಿಯಲ್ಲ. ದೇವಸ್ಥಾನಕ್ಕೆ ನಾನು ಆ ದಿನ ಮುಂಜಾನೆ ಒಬ್ಬನೇ ಹೋಗಿದ್ದೆ. ದೇವಸ್ಥಾನಕ್ಕೂ ಮತ್ತು ನಮ್ಮ ಮನೆಗೂ 2 ಕಿಮೀ. ಆಗುತ್ತದೆ. ದೇವಸ್ಥಾನಕ್ಕೆ ಹೋಗಲು ಸದರಿ ಗ್ರಾಮದ ಮನೆಯ ಕಡೆ ಹಾದುಹೋಗಬೇಕು ಎಂದರೆ ಸರಿ. ಪ್ರತಿ ತಿಂಗಳು ಹುಂಡಿಯನ್ನು ತೆಗೆದಾಗ ಅದರಲ್ಲಿ 5-6 ಸಾವಿರ ಇರುತ್ತದೆ. ಅದರ ಆಧಾರದ ಮೇಲೆ 5 ಸಾವಿರ ಕಳ್ಳತನ ಆಗಿದೆ ಎಂದು ಹೇಳುತ್ತಿದ್ದೇನೆ. ಚಿಲ್ಕ ಮತ್ತು ಬೀಗ ಅಲ್ಲೇ ಬಿದ್ದಿತ್ತು. ಸದರಿ ಚಿಲ್ಕ ಮತ್ತು ಬೀಗ ಪೊಲೀಸರಿಗೆ ಕೊಟ್ಟಿರುತ್ತೇನೆ. ಹುಂಡಿಯನ್ನು ಪೊಲೀಸರು ತೆಗೆದುಕೊಂಡು ಹೋಗಿರುವುದಿಲ್ಲ. ಹುಂಡಿಯಲ್ಲಿ ಹಣ ಕಳ್ಳತನವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹೆಸರು, ವಿಳಾಸ ನನಗೆ ಗೊತ್ತಿಲ್ಲ. ನನಗೆ ಹೇಳಿರುವುದಿಲ್ಲ. ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯನ್ನು ಹಳೇಬೀಡು ಠಾಣೆಯಲ್ಲಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆ ಪೊಲೀಸರು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಸಂಬಂಧವಿಲ್ಲದಿದ್ದರೂ ಸಹ ಕಮಿಟಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

ಓ ಹೇ ಕೇ ಸ ಇ ಒ

ಜೆಎಂಎಫ್‌ಸಿ-ಬೇಲೂರು

**Case Called.**

**Accused present.**

**CW-2 present and fully examined PW-2.**

**At the request of Learned APP CW-3 and 4 are given up in order to avoid repetition of facts.**

**Issue WS to Cw.5 to 8 by 07.03.2020.**

**Civil Judge: Belur**